ಸಂಖ್ಯೆ : ಕೆ.ಎಸ್.ಎಫ್.ಸಿ/ಪ್ರ.ಕ./ಆಡಳಿತ/ಹೆಚ್.ಡಿ.೧೭೯/೨೦೦೮-೦ ದಿನಾಂಕ ೦೫.೦೮.೨೦೦೮

ಸುತ್ತೋಲೆ

ವಿಷಯ : ಕಛೇರಿ ವಾಹನ ಮಾರಾಟ – ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಖರೀದಿದಾರರ ಹೆಸರಿಗೆ ವರ್ಗಾವಣೆಯಾದುದನ್ನು ಖಚಿತ ಪಡಿಸಿ ವಾಹನ ಹಸ್ತಾಂತರ.

---------

ಅನುಪಯುಕ್ತ ಕಛೇರಿ ವಾಹನಗಳನ್ನು ಮಾರಾಟ ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪ್ರಧಾನ ಕಛೇರಿಯ ಅನುಮತಿಗೆ ಕಳುಹಿಸಿ ಕೊಡುವುದು ಸರಿಯಷ್ಟೆ. ಪ್ರಧಾನ ಕಛೇರಿಯ ಅನುಮತಿ ಪಡೆದ ಮೇಲೆ ಮತ್ತು ಮಾರಾಟ ಪ್ರಕ್ರಿಯೆಯನ್ನು ಪ್ರಾರಂಭಿಸಿದ ನಂತರ ಸಂಬಂಧಿಸಿದ ವಾಹನವನ್ನು ಕಛೇರಿಯ ಕಾರ್ಯಗಳಿಗೆ ಉಪಯೋಗ ಮಾಡಬಾರದು. ಇದಲ್ಲದೆ ಇಂತಹ ವಾಹನಗಳ ಮಾರಾಟಕ್ಕೆ ಸಕ್ಷಮ ಪ್ರಾಧಿಕಾರದವರು ಆದೇಶಿಸಿದ ನಂತರ ವಾಹನವನ್ನು ಖರೀದಿಸಿದವರ ವಶಕ್ಕೆ ಹಸ್ತಾಂತರಿಸುವ ಮೊದಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಅವರ ಹೆಸರಿಗೆ ವರ್ಗಾವಣೆಯಾದುದನ್ನು ಖಚಿತ ಪಡಿಸಿಕೊಳ್ಳಬೇಕು. ವರ್ಗಾವಣೆಯ ಬಗ್ಗೆ ಖಾತರಿಯಾದ ನಂತರವೇ ವಾಹನವನ್ನು ಖರೀದಿದಾರರಿಗೆ ಹಸ್ತಾಂತರಿಸಬೇಕೆಂದು ಸಕ್ಷಮ ಪ್ರಾಧಿಕಾರದವರು ಸೂಚಿಸಿರುತ್ತಾರೆ. ಇದನ್ನು ಎಲ್ಲರೂ ತಪ್ಪದೇ ಪಾಲಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಸಹಿ/-
ಕಾರ್ಯ ನಿರ್ವಾಹಕ ನಿರ್ದೇಶಕರು[ಹಣಕಾಸು]

ಎಲ್ಲಾ ಶಾಖಾ / ವಲಯ ಕಛೇರಿಗಳಿಗೆ
ಎಲ್ಲಾ ಆ. ಲೆ. ಪ. ವಿಭಾಗಗಳಿಗೆ
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು[ಕಾರ್ಯಾಚರಣೆ]

ವ್ಯವಸ್ಥಾಪಕ ನಿರ್ದೇಶಕರು – ಘನ ಅವಗಾಹನೆಗಾಗಿ